ಕರ್ನಾಟಕ ಸರ್ಕಾರ

ಸಂಖ್ಯೆ: ಕಂಇ 101 ಮುನೋಮು 2015

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:21-12-2016

## ಸುತ್ತೋಲೆ

ವಿಷಯ: ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಕೊಡಗು ಜಿಲ್ಲೆಗಳ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸ್ಥಿರ ಸ್ವತ್ತುಗಳನ್ನು ನೋಂದಣಿ ಮಾಡುವಾಗ ಅನುಸರಿಸುವ ಕ್ರಮ.

ಉಲ್ಲೇಖ: 1) ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ 06 ಮುನೋಮು 2013 ದಿನಾಂಕ: 18-07-2014.

2) ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ 101 ಮುನೋಮು 2015 ದಿನಾಂಕ: 29-02-2016.

* * *

ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸ್ಥಿರ ಸ್ವತ್ತುಗಳನ್ನು ನೋಂದಣಿ ಮಾಡುವ ಸಮಯದಲ್ಲಿ ಕ್ರಮಬದ್ಧವಾದ ಸ್ವತ್ತುಗಳಿಗೆ ನಮೂನೆ-9 ಮತ್ತು 11-ಎ ಗಳಿಗೆ ಸಂಬಂಧಿಸಿದ ಮಾಹಿತಿ ಹಾಗೂ ಕ್ರಮ ಬದ್ಧವಲ್ಲದ ಸ್ವತ್ತುಗಳಿಗೆ 11-ಬಿ ಗೆ ಮಾತ್ರ ಸಂಬಂಧಿಸಿದ ಮಾಹಿತಿಯನ್ನು "ಇ-ಸ್ವತ್ತು" ತಂತ್ರಾಂಶದಿಂದ ಕಡ್ಡಾಯವಾಗಿ ಪಡೆದು ನೋಂದಣಿ ಮಾಡಲು ಉಲ್ಲೇಖ (1)ರ ಸುತ್ತೋಲೆಯಲ್ಲಿ ಆದೇಶಿಸಲಾಗಿತ್ತು. ಆದರೆ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ಹೆಚ್ಚಿನ ಭಾಗ ಅರಣ್ಯ ಪ್ರದೇಶವಿರುವ ಹಿನ್ನೆಲೆಯಲ್ಲಿ, "ಇ-ಸ್ವತ್ತು" ತಂತ್ರಾಂಶವನ್ನು ಸರ್ಮಪಕವಾಗಿ ಅನುಷ್ಠಾನ ಮಾಡಲು ಸಾಧ್ಯವಾಗಿಲ್ಲವೆಂಬ ಕಾರಣದಿಂದಾಗಿ, ಮೇಲ್ಕಂಡ ಆರು ಜಿಲ್ಲೆಗಳಿಗೆ ಮಾತ್ರ ಸೀಮಿತವಾಗುವಂತೆ "ಇ-ಸ್ವತ್ತು" ತಂತ್ರಾಂಶದಿಂದ ತಾತ್ಕಾಲಿಕವಾಗಿ ಮುಂದಿನ ಆದೇಶದವರೆಗೆ ವಿನಾಯಿತಿಯನ್ನು ಉಲ್ಲೇಖ (2)ರ ಸುತ್ತೋಲೆಯಲ್ಲಿ ನೀಡಲಾಗಿತ್ತು.

ಮೇಲ್ಕಾಣಿಸಿದ ಆರು ಜಿಲ್ಲೆಗಳಲ್ಲಿ ಈಗ "ಇ-ಸ್ವತ್ತು" ತಂತ್ರಾಂಶದ ಮೂಲಕ ನಮೂನೆ-9 ಮತ್ತು 11-ಎ ಗಳನ್ನು ವಿತರಿಸಲಾಗುತ್ತಿರುವುದರಿಂದ, ಹಾಗೂ "ಕಾವೇರಿ" ತಂತ್ರಾಂಶ ಮತ್ತು "ಇ-ಸ್ವತ್ತು" ತಂತ್ರಾಂಶವನ್ನು ಸಂಯೋಜನೆಗೊಳಿಸಿರುವುದರಿಂದ, ದಿನಾಂಕ:21-12-2016ರಿಂದ ಜಾರಿಗೆ ಬರುವಂತೆ, ನಮೂನೆ-9 ಮತ್ತು 11-ಎ ಗಳಿಗೆ ಮಾತ್ರ ಸಂಬಂಧಿಸಿದ ಮಾಹಿತಿಯನ್ನು "ಇ-ಸ್ವತ್ತು" ತಂತ್ರಾಂಶದಿಂದ ಕಡ್ಡಾಯವಾಗಿ ಪಡೆದು ನೋಂದಣಿ ಮಾಡಲು ಆದೇಶಿಸಿದೆ. ಉಳಿದಂತೆ, ಮೇಲ್ಕಾಣಿಸಿದ ಆರು ಜಿಲ್ಲೆಗಳಲ್ಲಿ ಕ್ರಮ ಬದ್ಧವಲ್ಲದ ಸ್ವತ್ತುಗಳಿಗೆ ಸಂಬಂಧಿಸಿದಂತೆ ಕೈಬರಹದ ಮೂಲಕ ನೀಡಲಾಗುವ ನಮೂನೆ 11-ಬಿಅನ್ನು ಪಡೆದು ನೋಂದಾಯಿಸ ಬಹುದಾಗಿರುತ್ತದೆ.

. . . .2

ಒಂದು ವೇಳೆ ಮೇಲ್ಕಾಣಿಸಿದ ಆರು ಜಿಲ್ಲೆಗಳಲ್ಲಿ ನಮೂನೆ-9 ಮತ್ತು 11-ಎ ಗಳಿಗೆ ಸಂಬಂಧಿಸಿದ ಮಾಹಿತಿ "ಇ-ಸ್ವತ್ತು" ತಂತ್ರಾಂಶದಿಂದ ಲಭ್ಯವಿಲ್ಲದಿದ್ದಲ್ಲಿ, ಕಾವೇರಿ ತಂತ್ರಾಂಶದಿಂದ ಉತ್ಪತ್ತಿಯಾಗುವ ಹಿಂಬರಹವನ್ನು ದಸ್ತಾವೇಜು ಹಾಜರುಪಡಿಸುವ ಪಕ್ಷಕಾರರಿಗೆ ನೀಡಲು ಸೂಚಿಸಿದೆ.

ಇದನ್ನು ಹೊರತುಪಡಿಸಿ, ಬೇರೆ ಯಾವುದೇ ವಿಧಾನದಲ್ಲಿ ನೋಂದಣಿ ಮಾಡಿದಲ್ಲಿ ಅಂತಹ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು.

(ಟಿ.ನಾರಾಯಣಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ನೋಂ & ಮು).

ಇವರಿಗೆ

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು-ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು.

ಪ್ರತಿ:

1) ಪ್ರಧಾನ ಮಹಾಲೇಖಪಾಲರು (ಎ&ಇ) ರವರ ಕಾರ್ಯದರ್ಶಿ, ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ: 5329, ಬೆಂಗಳೂರು-560 001.
2) ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
3) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
4) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಾರ್ವಜನಿಕ ಉದ್ದಿಮೆಗಳ ಇಲಾಖೆ.
5) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವಸತಿ ಇಲಾಖೆ.
6) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ.
7) ನೋಂದಣಿ ಮಹಾ ಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರು, ಕಂದಾಯ ಭವನ, ಬೆಂಗಳೂರು.
8) ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
9) ಎಲ್ಲಾ ಜಿಲ್ಲಾ ನೋಂದಣಾಧಿಕಾರಿಗಳು – ಐಜಿಆರ್ ಮುಖಾಂತರ.
10) ಎಲ್ಲಾ ಉಪ ನೋಂದಣಾಧಿಕಾರಿಗಳು – ಐಜಿಆರ್ ಮುಖಾಂತರ.
11) ಸರ್ಕಾರದ ಕಾರ್ಯದರ್ಶಿ, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ) ಇವರ ಆಪ್ತ ಕಾರ್ಯದರ್ಶಿ.
12) ಸರ್ಕಾರದ ಉಪ ಕಾರ್ಯದರ್ಶಿ, ಕಂದಾಯ ಇಲಾಖೆ (ನೋಂ & ಮು) ಇವರ ಆಪ್ತ ಸಹಾಯಕರು.
13) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.